**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಹೆಚ್.ಡಿ.ಕೋಟೆ**

**ಓ.ಎಸ್. ನಂ. 76/2019**

**ಸಾಕ್ಷಿಗೆ ದಿನಾಂಕ 12.12.2024 ರಂದು ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಸುಪ್ರಿಯಾ ದೇವನೂರು | ಪಿ.ಡಬ್ಲ್ಯೂ–1 |
| ತಂದೆಯ/ಗಂಡನ ಹೆಸರು | : | ಭರತೇಶ ಕುಮಾರ್ | |
| ವಯಸ್ಸು | : | 35 | |
| ಉದ್ಯೋಗ | : | ಸೀನಿಯರ್ ಸೈಂಟಿಫಿಕ್ ಆಫೀಸರ್ | |
| ವಾಸಸ್ಥಳ | : | ಮೈಸೂರು | |

**ಮುಖ್ಯ ವಿಚಾರಣೆಃ**

ನಾನು 2022 ರಿಂದ ಮೈಸೂರಿನ ಆರ್.ಎಫ್.ಎಸ್.ಎಲ್ ನಲ್ಲಿ ಸೀನಿಯರ್ ಸೈಂಟಿಫಿಕ್ ಆಫೀಸರ್ ಆಗಿ ಕೆಲಸ ಮಾಡುತ್ತಿದ್ದೇನೆ. ಈ ದಾವೆಗೆ ಸಂಬಂಧಿಸಿದಂತೆ ಮುತ್ತುಸ್ವಾಮಿ ಎಂಬುವವರ ಒಪ್ಪಿತ ಸಹಿ ಎಸ್–1 ಮತ್ತು ಎಸ್–2 ಅನ್ನು ವಿವಾದಿತ ದಾಖಲೆಗಳಾದ ಸಿ–1 ರಿಂದ ಸಿ–4 ರಲ್ಲಿರುವ ಸಹಿಗಳನ್ನು ಸಿ–1 ಎ ರಿಂದ ಸಿ–4 ಎ ವರೆಗಿನ ಸಹಿಗಳನ್ನು ತಾಳೆ ಮಾಡಿ ವರದಿ ನೀಡುವಂತೆ ವಾರೆಂಟ್ ಬಂದಿದ್ದು, ಆ ಪ್ರಕಾರ ನಾನು ಎಸ್–1 ಮತ್ತು ಎಸ್–2 ದಾಖಲೆಯಲ್ಲಿರುವ ಸಹಿಯನ್ನು ಎ–1 ರಿಂದ ಎ–4 ಎಂದು ಗುರುತಿಸಿ ಸದರಿ ಸಹಿಗಳನ್ನು ವಿವಾದಿತ ಸಿ–1 ಎ ರಿಂದ ಸಿ–4 ಎ ವರೆಗಿನ ಸಹಿಗಳನ್ನು ವೈಜ್ಞಾನಿಕವಾಗಿ ವಿಡಿಯೋ ಸ್ಪೆಕ್ಟಲ್ ಕಂಪ್ಯಾರೇಟಿವ್ ಎಂಬ ಉಪಕರಣದಿಂದ ಪರೀಕ್ಷಿಸಿದಾಗ ಈ ಕೆಳಕಂಡ ಅಭಿಪ್ರಾಯವನ್ನು ನೀಡಿರುತ್ತೇನೆ.

ಸಿ–1 ಎ ರಿಂದ ಸಿ–4 ಎ ಹಾಗೂ ಎ 1 ರಿಂದ ಎ 4 ಸಹಿಗಳು ಇಬ್ಬರು ಬೇರೆ ಬೇರೆ ವ್ಯಕ್ತಿಗಳ ಮಾಡಿರುವ ಸಹಿಗಳಾಗಿರುತ್ತವೆ. ಈ ಬಗ್ಗೆ ನನ್ನ ವರದಿಯನ್ನು ನೀಡಿದ್ದು, ಸಾಕ್ಷಿದಾರರು ಸದರಿ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ1 ಎಂದು, ಸಿಗ್ನೇಚರ್ ಎನಲಾರ್ಜ್ ಪ್ರಿಂಟನ್ನು ನಿಪಿ1 ಎ ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ ಏನೂ ಇಲ್ಲ

**ಪಾಟೀ ಸವಾಲುಃ ವಾದಿ ಪರ ಶ್ರೀ ಬಿ.ಸಿ.ಎಂ ವಕೀಲರಿಂದಃ**

ನಾನು 2014 ರಿಂದ 2022 ರವರೆಗೆ ಮಡಿವಾಳದ ವಿಧಿವಿಜ್ಞಾನ ಪ್ರಯೋಗಾಲಯದಲ್ಲಿ ಕೆಲಸ ಮಾಡಿರುತ್ತೇನೆ. ವೈಜ್ಞಾನಿಕ ಪರಿಶೀಲನೆಯ ಆಧಾರದ ಮೇಲೆ ನಾನು ನನ್ನ ಅಭಿಪ್ರಾಯವನ್ನು ನೀಡಿರುತ್ತೇನೆ. ನನ್ನ ವರದಿಯಲ್ಲಿ ಸಹಿಗಳನ್ನು ಬೇರೆ ಬೇರೆ ವ್ಯಕ್ತಿ ಮಾಡಿರುತ್ತಾರೆ ಎಂದು ಅಭಿಪ್ರಾಯ ನೀಡಬಹುದೇ ವಿನಃ ನನ್ನ ನಿರ್ಧಾರ ತಿಳಿಸಲು ಸಾಧ್ಯವಿಲ್ಲ ಎಂದರೆ ಸಾಕ್ಷಿದಾರರು ನನ್ನ ಅಭಿಪ್ರಾಯವನ್ನು ನೀಡಿರುತ್ತೇನೆ ಎನ್ನುವರು. ನಾನು ನೀಡಿರುವ ನಿಪಿ1 ವರದಿಯು ಒಬ್ಬ ತಜ್ಞರಿಂದ ಇನ್ನೊಬ್ಬ ತಜ್ಞರಿಗೆ ಬದಲಾವಣೆಯಾಗುವ ಸಾಧ್ಯತೆ ಇರುತ್ತದೆ ಎಂದರೆ ಸರಿಯಲ್ಲ. ತಜ್ಞರ ಅನುಭವದ ಆಧಾರದ ಮೇಲೆ ವರದಿಯು ಬದಲಾವಣೆಯಾಗುತ್ತದೆ ಎಂದರೆ ಸರಿಯಲ್ಲ. ಒಬ್ಬ ವ್ಯಕ್ತಿಯು ಹಲವಾರು ವರ್ಷಗಳ ನಂತರ ಸಹಿ ಮಾಡಿದಾಗ ಸಹಿಯಲ್ಲಿ ಬದಲಾವಣೆಯಾಗುತ್ತದೆ ಎಂದರೆ ಸಾಕ್ಷಿದಾರರು ಸಹಿ ಬದಲಾವಣೆಯಾಗುವುದಿಲ್ಲ, ಸ್ವಾಭಾವಿಕ ಬದಲಾವಣೆಯಾಗುತ್ತದೆ ಎನ್ನುವರು. ಒಬ್ಬ ವ್ಯಕ್ತಿಯು ಮಾನಸಿಕವಾಗಿ ಅಥವಾ ದೈಹಿಕವಾಗಿ ತೊಂದರೆಗೊಳಗಾದಾಗ ಆತನ ಸಹಿಯಲ್ಲಿ ಬದಲಾವಣೆಯಾಗುವ ಸಾಧ್ಯತೆ ಇರುತ್ತದೆ ಎಂದರೆ ಸಾಕ್ಷಿದಾರರು ನರಕ್ಕೆ ಸಂಬಂಧಿಸಿದಂತೆ ತೊಂದರೆಯಾದಲ್ಲಿ ಸಹಿಯಲ್ಲಿ ಬದಲಾವಣೆಯಾಗುವ ಸಾಧ್ಯತೆ ಇರುತ್ತದೆ ಎನ್ನುವರು. ಒಬ್ಬ ವ್ಯಕ್ತಿಯು ತನ್ನ ಚಿಕ್ಕ ವಯಸ್ಸಿನಲ್ಲಿ ಮಾಡಿರುವ ಸಹಿಗೂ ಆತನು ವಯಸ್ಸಾದ ನಂತರ ಮಾಡುವ ಸಹಿಗೂ ವ್ಯತ್ಯಾಸವಿರುತ್ತದೆ ಎಂದರೆ ಸಾಕ್ಷಿದಾರರು ವಯಸ್ಸಿನ ಬದಲಾವಣೆಯಾದಂತೆ ಸಹಿಯಲ್ಲಿ ವ್ಯತ್ಯಾಸವಾಗುತ್ತದೆ ಎನ್ನುವರು. ಒಬ್ಬ ವ್ಯಕ್ತಿಯು ಚಿಕ್ಕದಾದ ಸ್ಥಳದಲ್ಲಿ ಸಹಿ ಮಾಡಿದಾಗ ಮತ್ತು ತುಂಬಾ ಜಾಗ ಇರುವ ಜಾಗದಲ್ಲಿ ದೊಡ್ಡದಾಗಿ ಸಹಿ ಮಾಡಿದಾಗ ಸಹಿಗಳಲ್ಲಿ ವ್ಯತ್ಯಾಸವಾಗುತ್ತದೆ ಎಂದರೆ ಸಾಕ್ಷಿದಾರರು ವ್ಯತ್ಯಾಸವಾಗುವುದಿಲ್ಲ, ಆದರೆ ಚಿಕ್ಕದಾದ ಸ್ಥಳದಲ್ಲಿ ಸಹಿ ಮಾಡುವಾಗ ಫ್ರೀ ಮತ್ತು ಫರ್ಮ್ ಮೂವ್‌ಮೆಂಟ್ ಕಡಿಮೆ ಇರುತ್ತದೆ ಎನ್ನುವರು. ಒಬ್ಬ ವ್ಯಕ್ತಿಯು ತನಗೆ ಪರಿಚಯವಿರದ ವ್ಯಕ್ತಿಯ ಅಥವಾ ತಾನು ನೋಡದಿರುವ ಸಹಿಯನ್ನು ನಕಲು ಮಾಡಲು ಸಾಧ್ಯವಿಲ್ಲ ಎಂದರೆ ಸಾಕ್ಷಿದಾರರು ಅದೇ ವ್ಯಕ್ತಿಯ ಸಹಿಯನ್ನು ನಕಲು ಮಾಡಲು ಸಾಧ್ಯವಿಲ್ಲ ಎನ್ನುವರು. ಒಬ್ಬ ವ್ಯಕ್ತಿಯು ಉಪಯೋಗಿಸುವ ಪೆನ್ನು ಸಹ ಸಹಿಯಲ್ಲಿ ಸ್ವಲ್ಪ ಬದಲಾವಣೆ ತರಬಹುದು ಎಂದರೆ ಸರಿ. ಒಬ್ಬ ವ್ಯಕ್ತಿಯು ಉಪಯೋಗಿಸುವ ಹಾಳೆಯ ಮೂಲಕವೂ ಸಹ ಸಹಿ ಸ್ವಲ್ಪ ಬದಲಾವಣೆಯಾಗಬಹುದು ಎಂದರೆ ಸಾಕ್ಷಿದಾರರು ಹಾಳೆಯು ದಪ್ಪವಾಗಿದ್ದಲ್ಲಿ ಪೆನ್ ಪ್ರೆಶರ್ ಬದಲಾವಣೆಯಾಗಬಹುದು ಎನ್ನುವರು. ಒಬ್ಬ ವ್ಯಕ್ತಿಯ ಬೆರಳಚ್ಚು ಬದಲಾವಣೆ

ಆಗುವುದಿಲ್ಲ, ಆದರೆ ಸಹಿಯಲ್ಲಿ ಬದಲಾವಣೆಯಾಗಬಹುದು ಎಂದರೆ ಸಾಕ್ಷಿದಾರರು ಸ್ವಾಭಾವಿಕ ಬದಲಾವಣೆಯಾಗಬಹುದು ಎನ್ನುವರು. ನಾನು ಹೋಲಿಕೆ ಮಾಡಿರುವ ಸಹಿಗಳಲ್ಲಿ ಕೆಲವು ಅಂಶಗಳು ವ್ಯತ್ಯಾಸವಿರುತ್ತದೆ ಎಂದು ಹೇಳಿರುವುದು ನನ್ನ ಅಭಿಪ್ರಾಯ ಎಂದರೆ ಸಾಕ್ಷಿದಾರರು ಎಲ್ಲ ಕ್ಯಾರೆಕ್ಟರುಗಳನ್ನು ಪರಿಶೀಲನೆ ಮಾಡಿ ಅಭಿಪ್ರಾಯ ನೀಡಿರುತ್ತೇನೆ ಎನ್ನುವರು. ನಾನು ಮೇಲೆ ಹೇಳಿರುವ ಎಲ್ಲಾ ಸಾಧ್ಯತೆಗಳನ್ನು ಪರಿಶೀಲನೆ ಮಾಡದೇ ಬೇರೆ ಬೇರೆ ವ್ಯಕ್ತಿ ಸಹಿ ಮಾಡಿರುತ್ತಾರೆ ಎಂದು ನನ್ನ ನಿರ್ಧಾರ ನೀಡಿರುತ್ತೇನೆ ಎಂದರೆ ಸಾಕ್ಷಿದಾರರು ವೈಜ್ಞಾನಿಕವಾಗಿ ಪರಿಶೀಲನೆ ಮಾಡಿ ನನ್ನ ಅಭಿಪ್ರಾಯ ನೀಡಿರುತ್ತೇನೆ ಎನ್ನುವರು.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.